ಆಡುತ್ತಿದ್ದವು. ತಂಗಾಳಿಯ ಜೊತೆಗೆ ಆಗೊಮ್ಮೆ ಈಗೊಮ್ಮೆ ಗಟ್ಟಿ ಗಾಳಿಯೂ ಬೀಸುತ್ತಿತ್ತು. ಆದರದು ಬಿರುಗಾಳಿಯೂ ಅಲ್ಲ, ಸುಳಿಗಾಳಿಯೂ ಅಲ್ಲ.

ಗಾಂಧಿ ಕಲ್ಲುಬೆಂಚಿನ ಮೇಲೆ ಕೂತಿದ್ದರು.

ಡಾ. ಅಂಬೇಡ್ಕರ್ ಬಂದರು. ಮಹದೇವ ದೇಸಾಯಿ ಆವರಣದ ಗೇಟಿನಲ್ಲೇ ನಿಂತಿದ್ದು ಕರೆದುಕೊಂಡು ಬಂದರು. ಅವರು ಬರುತ್ತಿರುವುದನ್ನು ಕಸ್ತೂರ್‌ಬಾ ಕಣ್ತುಂಬಿ ನೋಡಿದರು.

ಅಲ್ಲಿ ಫುಲ್ ಸೂಟ್‌ನಲ್ಲಿದ್ದ ಅಂಬೇಡ್ಕರ್. ಇಲ್ಲಿ ಅರೆಬೆತ್ತಲೆ ಉಡುಪಿನಲ್ಲಿದ್ದ ಗಾಂಧಿ. ಮೊದಲು ಫುಲ್ ಸೂಟ್‌ನಲ್ಲಿದ್ದ ಗಾಂಧಿ ಅರೆಬೆತ್ತಲೆ ಬಟ್ಟೆಗೆ ಬಂದಿದ್ದರು. ಅರೆಬೆತ್ತಲೆ ಜನರ ನಡುವಿನಿಂದ ಅಂಬೇಡ್ಕರ್ ಫುಲ್ ಸೂಟ್‌ಗೆ ಬಂದಿದ್ದರು. ಇಬ್ಬರದೂ ಎಂಥ ಸ್ಥಿತ್ಯಂತರ! ಗಾಂಧಿಯದು ಪಾಪಪ್ರಜ್ಞೆಯ ಫಲ. ಅಂಬೇಡ್ಕರ್ ಅವರದು ಜಾಗೃತ ಪ್ರಜ್ಞೆಯ ಫಲ. ಗಾಂಧಿಯವರದು ಆತ್ಮಶುದ್ಧಿಯ ಪ್ರತೀಕ. ಅಂಬೇಡ್ಕರ್ ಅವರದು ಆತ್ಮವಿಶ್ವಾಸದ ಪ್ರತೀಕ. ಇಬ್ಬರದೂ ಸೇರಿ ಚಾರಿತ್ರಿಕ.

ಅಂಬೇಡ್ಕರ್ ಬರುತ್ತಿರುವುದನ್ನು ನೋಡುತ್ತಿದ್ದ ಕಸ್ತೂರ್‌ಬಾಗೆ ಅವರ ಫುಲ್ ಸೂಟಿನ ಮೂಲಕ ಕಾಣುತ್ತಿದ್ದ ದೃಢ ನಡಿಗೆ ಇಷ್ಟವಾಯಿತು. ಅವರೂ ಇವರೂ ಒಂದಾಗಬಾರದೆ ಎನ್ನಿಸಿತು. ಅದು ತನ್ನ ಭಾವನೆ. ಇವರಿಬ್ಬರ ಚಿಂತನೆ ಹೇಗಿದೆಯೊ?

ಹಾಗಾದರೆ ಭಾವನೆ ಚಿಂತನೆ ಒಂದಾಗುವುದಿಲ್ಲವೆ? ಮನಸ್ಸು ಮಾಡಿದರೆ ಯಾವುದು ಅಸಾಧ್ಯ? ಭಾವನೆಯಲ್ಲಿ ಚಿಂತನೆ, ಚಿಂತನೆಯಲ್ಲಿ ಭಾವನೆ ಒಳಗೊಂಡಿದ್ದರೆ ಅಲ್ಲಿರುವ ಅರಿವಿನ ಅಂತಃಕರಣ ವಿಸ್ತಾರವಾದುದು. ಇದೇ ಮಾತುಗಳಲ್ಲದಿದ್ದರೂ ಇಂಥದೊಂದು ಭಾವನೆಯ ಭಾಷೆ ಕಸ್ತೂರ್‌ಬಾರ ಮನದ ಮಾತಾಗತೊಡಗಿತ್ತು. ಇವರಿಬ್ಬರೂ ಯಾಕೆ ಎದುರು ಬದುರಾಗಿರಬೇಕು ಎಂಬ ಮುಗ್ಧ ಮನದ ಅಭಿಲಾಷೆಯಾಗಿ ರೂಪುಗೊಂಡಿತ್ತು. ಇಬ್ಬರೂ ದೇಶದ ಜನಕ್ಕಾಗಿ ತಾನೇ ದುಡಿತಿರೋದು ಎಂಬ ಸಾಮಾನ್ಯ ತಿಳಿವಳಿಕೆ ಕೆಲಸ ಮಾಡಿತ್ತು.

ಅಷ್ಟರಲ್ಲಿ ಅಂಬೇಡ್ಕರ್ ಹತ್ತಿರ ಬಂದರು. ಗಾಂಧಿ, ಕೂಡಲೇ ಎದ್ದು ನಿಂತರು. ಕಸ್ತೂರ್‌ಬಾ ತಮಗರಿವಿಲ್ಲದಂತೆಯೇ ಎದ್ದು ನಿಂತಿದ್ದರು. ಗಾಂಧಿಯವರು ಅಂಬೇಡ್ಕರ್ ಅವರನ್ನು ಬರಮಾಡಿಕೊಂಡ ನಡೆ–ನುಡಿಯು ಕಸ್ತೂರ್‌ಬಾ ಅವರಲ್ಲಿ ಆನಂದ ಅರಳಿಸಿತ್ತು. ಇಬ್ಬರ ಸಮಾಗಮ ಸಂತೋಷ ತಂದಿತ್ತು.

'ಕಷಾಯ ತರ್ತೀನಿ ತಮಗೆ' ಎಂದು ಕಸ್ತೂರ್‌ಬಾ, ಅಂಬೇಡ್ಕರರಿಗೆ ಹೇಳಿದರು. ಅಂಬೇಡ್ಕರ್ 'ಬೇಡಿ ತಾಯಿ, ತೊಂದ್ರೆ ತಗೋಬೇಡಿ. ಒಂದಿಷ್ಟು ಮಾತಾಡೋಕ್ ಬಂದಿದ್ದೀನಿ. ಅಷ್ಟು ಸಾಕು' ಎಂದಾಗ ಕಸ್ತೂರ್‌ಬಾ ಗಾಂಧಿ ಕಡೆ ನೋಡಿದರು. 'ಅಂಬೇಡ್ಕರ್ ಅವರ ಇಷ್ಟ. ಬೇಡ ಅಂದ್ರೆ ಒತ್ತಾಯ ಮಾಡೋದ್ ಬೇಡ' ಎಂದರು ಗಾಂಧಿ. ಆಗ ಅಂಬೇಡ್ಕರ್, 'ಇದು ಒತ್ತಾಯದ ಪ್ರಶ್ನೆ ಅಲ್ಲ ಬಾಪು. ಉಪಚಾರ ಎಲ್ಲಾ ಯಾಕೆ? ಮಾತಾಡೋಣ. ಅದೇ ಎಲ್ಲಾ ಅಲ್ವ?' ಅಂದಾಗ ಗಾಂಧಿ ಸಮ್ಮತಿಯ ನಗೆ ಬೀರಿದರು. ಕಸ್ತೂರ್‌ಬಾ ಅಲ್ಲೇ ಕೂತರು. ಮಹದೇವ ದೇಸಾಯಿ ಮಾತುಕತೆಯನ್ನು ಎಚ್ಚರದಿಂದ ಕೇಳಿಸಿಕೊಳ್ಳತೊಡಗಿದರು.

ಸ್ವಲ್ಪ ಲೋಕಾಭಿರಾಮದ ಮಾತುಕತೆಯಾದ ಮೇಲೆ ಗಾಂಧಿ:

'ಅಲ್ಲ ಅಂಬೇಡ್ಕರ್ ಜೀ, ತಾವು ನನ್ನನ್ನ ಆಗಾಗ್ಗೆ ಕಟುವಾಗಿ ಟೀಕೆ ಮಾಡ್ತೀರಿ...'

ಎಂದು ಮಾತು ಮುಗಿಸುವುದಕ್ಕೆ ಮುಂಚೆಯೇ ಅಂಬೇಡ್ಕರ್, 'ನಿಮ್ಮನ್ನಲ್ಲ ನಿಮ್ಮ ಕೆಲವು ವಿಚಾರಗಳನ್ನ' ಎಂದರು.

ಗಾಂಧಿ ನಸು ನಕ್ಕರು.

'ವ್ಯಕ್ತಿ ಮತ್ತು ವಿಚಾರ, ಒಂದಕ್ಕೊಂದು ಸಂಬಂಧ ಇದ್ದೇ ಇರುತ್ತಲ್ವ?' ಎಂದರು.

ಅನಂತರ ತಾವೇ ಮಾತು ಮುಂದುವರಿಸಿದರು: 'ಹೋಗ್ಲಿ ಬಿಡಿ; ಅದು ಬೇರೇನೇ ಚರ್ಚೆ. ನೀವು ಟೀಕೆ ಮಾಡಬೇಡಿ ಅಂತ ನಾನು ಹೇಳಲ್ಲ. ಒಂದು ವಿಷ್ಯ ನಾನು ಸ್ಪಷ್ಟಪಡಿಸಲೇಬೇಕು. ನಾನು ಪ್ರಾಮಾಣಿಕನಾಗಿ ಅಸ್ಪೃಶ್ಯತೆ ವಿರೋಧಿ.'

ಅಂಬೇಡ್ಕರ್ ಕೇಳಿಸಿಕೊಳ್ಳುತ್ತಿದ್ದರು. ಕಸ್ತೂರ್‌ಬಾ ಇನ್ನೆಲ್ಲಿ ಜಟಾಪಟಿ ಶುರುವಾಗುತ್ತೊ ಅಂತ ಅನುಮಾನಿಸಿದರು. ಗಾಂಧಿ ಮುಂದುವರೆಸಿದರು:

'ಅಸ್ಪೃಶ್ಯತೆ ಅನ್ನೋದು ಹಿಂದೂ ಧರ್ಮದ ದೊಡ್ಡ ಪಾಪ ಮತ್ತು ಶಾಪ ಅಂತ ಅನೇಕ ಸಾರಿ ನಾನು ಹೇಳಿದ್ದೀನಿ. ಅಸ್ಪೃಶ್ಯತೆ ಉಳುದ್ರೆ ಹಿಂದೂ ಧರ್ಮ ಉಳಿಯೊಲ್ಲ; ಹಿಂದೂ ಧರ್ಮ ಉಳೀಬೇಕಾದ್ರೆ ಅಸ್ಪೃಶ್ಯತೆ ಅಳೀಬೇಕು ಅನ್ನೋವರ್‍ಗೂ ಮಾತಾಡಿದ್ದೀನಿ.'

ಅಂಬೇಡ್ಕರ್ ಖಚಿತವಾಗಿ ಪ್ರತಿಕ್ರಿಯಿಸಿದರು: 'ನಿಜ ಬಾಪೂಜಿ, ಆದ್ರೆ ಧರ್ಮದಲ್ಲೇ ಈ ಪಾಪದ ಬೀಜ ಇದೆ ಅಂದ್ಮೇಲೆ ಆ ಧರ್ಮ ಯಾಕೆ ಬೇಕು ಹೇಳಿ. ನೀವೂ ಮೊದಲೆಲ್ಲ ಜಾತಿ, ವರ್ಣಾಶ್ರಮ ಕುರಿತು ಏನ್ ಹೇಳಿದ್ರಿ ನೆನಪಿಸ್ಕೊಳ್ಳಿ.'

'ನೋಡಿ ಅಂಬೇಡ್ಕರ್ ಜೀ, ಮೊದಲು ನಾನು ಜಾತಿಪದ್ಧತೀಗೆ, ವರ್ಣಾಶ್ರಮಕ್ಕೆ ಬೇರೆಯದೇ ಅರ್ಥ ಕೊಡ್ತಿದ್ದೆ, ನಿಜ. ಒಂದು ಹಂತದವರೆಗೆ ಅವು ಅನಿವಾರ್ಯ ಅನ್ನೋ ಅರ್ಥ ಬರೋ ಹಾಗೂ ಮಾತಾಡಿದ್ದುಂಟು. ಆದ್ರೆ ನಿಮ್ ವಿಚಾರಗಳನ್ನು ಕೇಳ್ತಾ ಕೇಳ್ತಾ ನಾನೂ ಬದಲಾಗಿದ್ದೀನಿ.'

ಗಾಂಧಿ ಪ್ರಾಮಾಣಿಕವಾಗಿ ಹೇಳಿದರು. ಕಸ್ತೂರ್‌ಬಾಗೆ ಇದರಿಂದ ಸಮಾಧಾನವಾಯಿತು. ಸದ್ಯ, ತಾನು ಹೇಳಿದ್ದೇ ಸರಿ ಅಂತ, ವಾದಕ್ಕೆ ಹೊರಡಲಿಲ್ಲವಲ್ಲ ಅಂತ ಸ್ವಲ್ಪ ನಿರಾಳವಾದರು. ಗಾಂಧಿ ಮಾತಿಗೆ ಅಂಬೇಡ್ಕರ್ ಅವರಿಗೂ ಸಂತೋಷವಾಯಿತು. ಅದನ್ನು ನೇರವಾಗಿಯೇ ವ್ಯಕ್ತಪಡಿಸಿದರು:

'ಸಂತೋಷ ಬಾಪೂಜಿ. ನಿಮ್ಮ ಸೌಜನ್ಯಕ್ಕೆ ಧನ್ಯವಾದ. ಆದ್ರೆ ನೀವಷ್ಟೇ ಅಲ್ಲ. ನೀವು ನಂಬಿರೊ ಧರ್ಮಾನೂ ಬದಲಾಗಬೇಕು; ದೇಶ ಬದಲಾಗಬೇಕು. ಅಲ್ವ?'

'ನಿಜ, ನಾನಂತೂ ಒಂದ್ ಮಾತನ್ನ ಸ್ಪಷ್ಟವಾಗಿ ಹೇಳ್ತೀನಿ. ಜಾತಿ, ವರ್ಣ ಅಂತ ತಾರತಮ್ಯ ಮಾಡೋದೇ ಶಾಸ್ತ್ರಬದ್ಧ ಅನ್ನೋದಾದ್ರೆ ನನಗೆ ಅಂಥ ಶಾಸ್ತ್ರಾನೂ ಬೇಡ, ಅದನ್ನ ಅನುಸರಿಸೊ ಧರ್ಮಾನೂ ಬೇಡ; ಅಷ್ಟು ಬದಲಾಗ್ತೀನಿ ನಾನು.'

ಗಾಂಧಿ ಖಚಿತವಾದ ದೃಢಧ್ವನಿಯಲ್ಲಿ ಹೇಳಿದರು.

ಕಸ್ತೂರ್‌ಬಾ ಬೆರಗಿನಿಂದ ಕೇಳಿಸಿಕೊಳ್ಳುತ್ತಿದ್ದರು.

ಮಹದೇವ ದೇಸಾಯಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು.

ಅಂಬೇಡ್ಕರ್ ಅವರಿಗೆ ಗಾಂಧಿ ದೃಢ ಚಿತ್ತ ಅರ್ಥವಾಯಿತು.

ಆದರೆ ಅವರ ಚಿಂತನೆ ವ್ಯಕ್ತಿಯಾಚೆಗಿನ ಸಮಾಜ ಬದಲಾವಣೆಯ ಕಡೆಗಿತ್ತು; ಅವರ ಪ್ರತಿಕ್ರಿಯೆ ಹೀಗಿತ್ತು:

'ನೀವು ಬದಲಾಗ್ತೀರಿ ಅಂದ್ಕೊಂಡ್ರೂ ಬಹುಸಂಖ್ಯಾತರು ಬದಲಾಗ್ತಾ ಇಲ್ಲ ಬಾಪೂಜಿ. ಇವತ್ತಿನ ಜಡ ಸಂಪ್ರದಾಯವಾದಿಗಳೇ ಧರ್ಮದ ಗುತ್ತಿಗೆದಾರರು; ಅಸ್ಪೃಶ್ಯತೆಯ ಆರಾಧಕರು.'

ಅಂಬೇಡ್ಕರ್ ಅವರ ದನಿಯಲ್ಲಿ ಖಚಿತತೆ ಇತ್ತು. ನೋವು ತುಂಬಿದ ವಿಷಾದವಿತ್ತು. ಅವರ ಮಾತು ಸಿಡಿಯಲು ಕಾದಿರುವ ಕಿಡಿನುಡಿಯಾಗಿತ್ತು. ಗಾಂಧಿ ಅದಕ್ಕೆ ಪ್ರತಿಕ್ರಿಯಿಸಿದ ರೀತಿಯು ಸಮ್ಮತ ಭಾವದ ಸ್ಪಷ್ಟ ನಿರ್ಧಾರಕ ನುಡಿಯಾಗಿತ್ತು:

'ನೋಡಿ ಅಂಬೇಡ್ಕರ್‌ಜೀ, ಅಸ್ಪೃಶ್ಯತೆಯ ಆರಾಧಕರ ವಿರುದ್ಧ ನಾನು ಸತ್ಯಾಗ್ರಹಕ್ಕೂ ಸಿದ್ಧ. ನನ್ನ ಅರ್ಥದ ಹಿಂದೂ ಧರ್ಮ ಅಸ್ಪೃಶ್ಯತೆಯ ವಿರೋಧಿ; ಅನ್ಯ ಧರ್ಮಗಳ ವಿರೋಧಿ ಅಲ್ಲ.'

ಗಾಂಧಿ ಯಾವುದೇ ಸಂದಿಗ್ಧಕ್ಕೆ ಅವಕಾಶವಿಲ್ಲದಂತೆ ಹೇಳಿದರು. ಕಸ್ತೂರ್‌ಬಾಗೆ ಇವರಿಬ್ಬರ ಮಾತುಕತೆ ಬಿಸಿಯೇರುತ್ತಿದೆಯೆನ್ನಿಸಿ ಸ್ವಲ್ಪ ತಳಮಳಕ್ಕೆ ಒಳಗಾಗಿದ್ದರು. ಅಂಬೇಡ್ಕರ್ ವಿಚಾರ ಸಾರದಲ್ಲಿ ಗೊಂದಲಕ್ಕೆ ಅವಕಾಶವೇ ಇರಲಿಲ್ಲ. ಇವತ್ತಿನ ಚರ್ಚೆಯ ಕೊನೆಯ ಹಂತವೆಂಬಂತೆ ದೃಢವಾಗಿ ನುಡಿದರು:

'ಅಸ್ಪೃಶ್ಯತೆ ಹೋಗ್ಲೇಬೇಕು ಬಾಪೂಜಿ; ಜೊತೆಗೆ ಸೋದರತೆ ಬೇಕು, ಸಮಾನತೆ ಬೇಕು. ಅಸ್ಪೃಶ್ಯತೆ ಅನುಭವಿಸಿದವ್ರಿಗೆ ಇದು ಚೆನ್ನಾಗಿ ಅರ್ಥ ಆಗುತ್ತೆ. ನೋಡಿ ಬಾಪೂಜಿ, ನಮ್ಮನ್ನು ತೀರಾ ಕೀಳಾಗಿ ಕಾಣೋ ನಾಡನ್ನ, ಧರ್ಮಾನ, ನಮ್ಮ ನಾಡು, ನಮ್ಮ ಧರ್ಮ ಅಂತ ಹೇಗೆ ಭಾವಿಸೋದು? ಹೀಗೆ ನಾನು ಹೇಳ್ದೆ ಅಂತ ನನ್ನನ್ನ ದೇಶದ್ರೋಹಿ ಅನ್ನೋದಾದ್ರೆ ಅದಕ್ಕೆ ನಾನು ಹಿಂಜರಿಯೋದಿಲ್ಲ. ಶತಶತಮಾನದಿಂದ ತುಳಿತಕ್ಕೆ ಸಿಕ್ಕಿರೋ ನಮ್ಮ ಜನರ ಹಕ್ಕುಗಳಿಗಾಗಿ ಹೋರಾಡೋದನ್ನ ದೇಶದ್ರೋಹ ಅಂತ ನಾನು ಭಾವಿಸೋದಿಲ್ಲ.'

ಅದೇನನ್ನಿಸಿತೊ, ಕಸ್ತೂರ್‌ಬಾ ಥಟ್ಟನೆ 'ಅದೂ ದೇಶಪ್ರೇಮಾನೇ ಅಲ್ವ?' ಎಂದರು ಮೆಲುದನಿಯಲ್ಲಿ. ಗಾಂಧಿ ಅಚ್ಚರಿಯಿಂದ ನೋಡಿದರು. ಅಂಬೇಡ್ಕರ್ ಸಮ್ಮತಿಯೆಂಬಂತೆ ತಲೆಯಾಡಿಸಿದರು. ಕೈಮುಗಿದು, 'ನಾನಿನ್ನು ಬರ್ತೇನೆ' ಎಂದು ಎದ್ದುನಿಂತರು. ಗಾಂಧಿ ಎದ್ದು ನಿಂತು ಅಂಬೇಡ್ಕರ್‌ಗೆ ಕೈಮುಗಿದು 'ಆಗಾಗ್ಗೆ ಭೇಟಿ ಆಗ್ತೀರೋಣ' ಎಂದರು.